<u>ದಿನಾಂಕ 04-12-2025 ರಂದು ಮಾಡಿದ ಮಧ್ಯಂತರ ಆದೇಶದ ಮೇರೆಗೆ ಸಾಕ್ಷಿಯ ವಿಚಾರಣೆಃ</u>

<u>ಸಾಕ್ಷಿಗೆ ದಿನಾಂಕ 11-12-2025 ರಂದು ಪ್ರಮಾಣವಚನ ಬೋಧಿಸಲಾಯಿತು.</u>

(ಕಳೆದ ಬಾರಿ ಕೆಲವೊಂದು ಚೆಕ್ ನ ಪ್ರತಿಗಳನ್ನು ಎಣಿಸಿ ಗುರ್ತಿಸುವಲ್ಲಿ ಮೂರು ಚೆಕ್‌ಗಳ ಪ್ರತಿಗಳನ್ನು ಪರಿಗಣಿಸಿರುವುದಿಲ್ಲ. ಆದ್ದರಿಂದ ಅವುಗಳ ಗುರ್ತಿಸುವಿಕೆಗೆ ಎಸ್.ಪಿ.ಪಿ. ರವರು ವಿನಂತಿಸಿದ್ದರಿಂದ ಸಾಕ್ಷಿಯ ಮುಂದುವರೆದ ಮುಖ್ಯ ವಿಚಾರಣೆ.)

<u>ಮುಂದುವರೆದ ಮುಖ್ಯ ವಿಚಾರಣೆಃ ವಿಶೇಷ ಸಾರ್ವಜನಿಕ ಅಭಿಯೋಗಕರಿಂದಃ</u>

6. ಇನ್ನೂ ಮೂರು ಚೆಕ್‌ಗಳ ಛಾಯಾಪ್ರತಿಗಳನ್ನು ಅಮಾನತ್ತುಪಡಿಸಿಕೊಂಡಿದ್ದು ಅವು ಈಗ ತೋರಿಸಿದ್ದಿವೆ. ಅವುಗಳನ್ನು ನಿಪಿ-424 ರಿಂದ 426 ಎಂದು ಗುರ್ತಿಸಲಾಯಿತು.

<u>ಪಾಟೀ ಸವಾಲುಃ 7 ನೇ ಆರೋಪಿತನ ಪರ ಶ್ರೀ ಎಸ್.ಡಿ.ಸಿ. ವಕೀಲರಿಂದಃ</u>

7. ದಿನಾಂಕ 22-11-2012 ರಂದು ಲೋಕಾಯುಕ್ತ ಪೊಲೀಸ್ ಠಾಣೆಯವರು ನನ್ನ ಮೇಲಧಿಕಾರಿಗೆ ಲಿಖಿತ ಮನವಿ ನೀಡಿದ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ಮೇಲಧಿಕಾರಿಯವರು ದಿನಾಂಕ 22-11-2012 ರಂದು ಲೋಕಾಯುಕ್ತ ಪೊಲೀಸ್ ಠಾಣೆಗೆ ಹೋಗುವಂತೆ ಲಿಖಿತ ಆದೇಶ ನೀಡಿಲ್ಲ. ದಿನಾಂಕ 23-11-2012 ರಂದು ಬೆಳಿಗ್ಗೆ 05.00 ಘಂಟೆಗೆ ಲೋಕಾಯುಕ್ತ ಪೊಲೀಸ್ ಠಾಣೆಗೆ ಹೋದಾಗ ಆಗ ಪೊಲೀಸರು ಯಾವುದೇ ಮಾಹಿತಿಯನ್ನು ನೀಡಿರಲಿಲ್ಲ. ದಿನಾಂಕ 23-11-2012 ರಂದು ಲೋಕಾಯುಕ್ತ ಪೊಲೀಸ್ ಠಾಣೆಗೆ ಹೋಗಲು ನನ್ನ ಮೇಲಧಿಕಾರಿಯವರಿಂದ ಲಿಖಿತ ಆದೇಶ ಪಡೆದಿಲ್ಲ.

8. ಚಿಂತಾಮಣಿಗೆ ಹೋದಾಗ ಬೆಳಿಗ್ಗೆ ಅಂದಾಜು 06.30 ಘಂಟೆಯಾಗಿತ್ತು. ಆ ರೀತಿ ಹೋದ ಮೇಲೆ ವೇದ ಕೋ-ಆಪರೇಟಿವ್ ಸೊಸೈಟಿಯ ಬೀಳಿಸಿದ ಕಟ್ಟಡದ ಹತ್ತಿರ ಬೆಳಿಗ್ಗೆ ಸುಮಾರು 08.00 ಘಂಟೆಯವರೆಗೆ ಇದ್ದೆವು. ವೇದ ಕೋ-ಆಪರೇಟಿವ್ ಸೊಸೈಟಿಯ ಕಟ್ಟಡ ಬೀಳಿಸಿದ್ದರೂ ಸಹ 7 ನೇ ಆರೋಪಿಯು ಸದರಿ ವೇದ ಕೋ-ಆಪರೇಟಿವ್ ಸೊಸೈಟಿಯನ್ನು ತನ್ನ ಮನೆಯಲ್ಲಿ ನಡೆಸುತ್ತಿದ್ದ ಎಂದರೆ ನನಗೆ ಗೊತ್ತಿಲ್ಲ. 7 ನೇ ಆರೋಪಿಯ ಮನೆಯ ಹತ್ತಿರ ಹೋದಾಗ ಯಾವ ಉದ್ದೇಶಕ್ಕಾಗಿ ಬಂದಿದ್ದೇವೆ ಎಂದು ಲೋಕಾಯುಕ್ತ ಪೊಲೀಸರು ನಿಮಗೆ

ತಿಳಿಸಿದ್ದಾರಾ ಎಂದರೆ ಸಾಕ್ಷಿದಾರರು ಜೀಪಿನಲ್ಲಿ ಬರುವಾಗ ತಿಳಿಸಿದ್ದಾರೆ ಎನ್ನುತ್ತಾರೆ. ಅಮಾನತ್ತುಪಡಿಸಿಕೊಂಡ ದಾಖಲೆಗಳನ್ನು ಯಾವ ಉದ್ದೇಶಕ್ಕಾಗಿ ಸದರಿ ಸೊಸೈಟಿಗೆ ಕೊಟ್ಟಿದ್ದರು ಎಂದು ನಿಮಗೆ ಗೊತ್ತೇ ಎಂದರೆ ಸಾಕ್ಷಿದಾರರು ಸಮಾಜ ಕಲ್ಯಾಣ ಇಲಾಖೆಯಲ್ಲಿ ಅಕ್ರಮವಾಗಿ ಅಡುಗೆಯವರನ್ನು ನೇಮಕ ಮಾಡಿಕೊಂಡಿದ್ದಿಕ್ಕೆ ಸಂಬಂಧಪಟ್ಟಂತೆ ಇದೆ ಎನ್ನುತ್ತಾರೆ.

9. ಮುಖ್ಯ ವಿಚಾರಣೆಯ ನಾಲ್ಕನೇ ಪುಟದ ಟೇಬಲ್‌ನಲ್ಲಿ ಕ್ರಮ ಸಂಖ್ಯೆ-1 ರಿಂದ 24 ರವರೆಗೆ ಹೆಸರಿಸಿದ ವ್ಯಕ್ತಿಗಳ ಪರಿಚಯ ನನಗೆ ಇಲ್ಲ ಎಂದರೆ ಸರಿ. ನಿಪಿ-354 ರಿಂದ 422, 424 ರಿಂದ 426 ಈ ದಾಖಲೆಗಳನ್ನು ಯಾವ ವಿಚಾರಕ್ಕಾಗಿ ಅಮಾನತ್ತುಪಡಿಸಿಕೊಳ್ಳಲಾಗಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ.

10. ವೇದ ಕೋ-ಆಪರೇಟಿವ್ ಸೊಸೈಟಿಯವರಿಗೆ Third Party Cheque ನ್ನು Discount ಮಾಡುವ ಅಧಿಕಾರ ಇದೆ ಎಂದರೆ ನನಗೆ ಗೊತ್ತಿಲ್ಲ.

11. ನಾನು ಯಾವತ್ತೂ 7 ನೇ ಆರೋಪಿಯ ಮನೆಗಾಗಲೀ ಅಥವಾ ವೇದ ಕೋ-ಆಪರೇಟಿವ್ ಸೊಸೈಟಿಯ ಕಟ್ಟಡದ ಹತ್ತಿರವಾಗಲೀ ಹೋಗಿಲ್ಲ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಅಲ್ಲಿ ಯಾವುದೇ ದಾಖಲೆಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಎಲ್ಲಾ ಸಹಿಗಳನ್ನು ಲೋಕಾಯುಕ್ತ ಪೊಲೀಸ್ ಠಾಣೆಯಲ್ಲಿಯೇ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರ ಮಾತು ಕೇಳಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ</u> ಇಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ಅವರ ಹೇಳಿಕೆಯನ್ನು ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿ, ಪುನಃ ಓದಿ ಹೇಳಲಾಯಿತು ಮತ್ತು ಸಾಕ್ಷಿದಾರರು ಸರಿ ಇದೆ ಎಂದು ತಿಳಿಸುತ್ತಾರೆ.)

ಓ. ಹೇ. ಕೇ. ಸ. ಇದೆ,

ಸಹಿ/-
(ವಿಜಯಕುಮಾರ್ ಎಂ. ಆನಂದಶೆಟ್ಟಿ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೋಲಾರ